ದಿನಾಂಕ 17.04.2026 ರಂದು ಸಾಕ್ಷಿಯನ್ನು ಕರೆಸಿ ವಿಧಿಬದ್ಧವಾದ ಪ್ರಮಾಣವಚನವನ್ನು ಭೋಧಿಸಲಾಯಿತು.

ಪಾಟೀ ಸವಾಲು : ವಾದಿ ಪರ ಶ್ರೀ. ಸಿ ಎಸ್ ಕೆ ವಕೀಲರಿಂದಃ

ನಾನು ಬಿ ಎಸ್ ಸಿ ಪದವಿದಾರ. ನಾನು ಹೊರ ದೇಶದಲ್ಲಿ 30 ವರ್ಷಗಳ Marketing ಕೆಲಸ ಮಾಡುತ್ತಿದ್ದೆ. ಏನು Marketing ಮಾಡುತ್ತಿದ್ದೀರಿ ಎಂದರೇ ಸ್ವಲ್ಪ ದಿನ ಟೈರ್, ಸ್ವಲ್ಪ ದಿನ ಕಾರು ಮತ್ತು ಜಪಾನಿನ ಸಾಮಾಗ್ರಿಗಳನ್ನು ಮಾರಾಟ ಮಾಡುತ್ತಿದ್ದೆ. ಅವುಗಳಿಗೆ ದಾಖಲೆ ಹಾಜರುಪಡಿಸಬಹುದ ಎಂದರೇ ಬೇಕಾದರೆ ಕೊಡುತ್ತೇನೆ. ಈ ದಾವೆಯಲ್ಲಿ ನಾನು ನನ್ನ ಹೆಂಡತಿ ಪರವಾಗಿ SPA Holder ಆಗಿ ಸಾಕ್ಷಿ ವಿಚಾರ ಕೊಡುತ್ತಿದ್ದೇನೆ ಎಂದರೇ ಹೌದು. PW-1 ರವರ ಮುಖ್ಯ ವಿಚಾರಣೆ ಮತ್ತು ಪಾಟೀ ಸವಾಲನ್ನು ಓದಿ ತಿಳಿದುಕೊಂಡಿದ್ದೀರ ಎಂದರೇ ಸ್ವಲ್ಪ ತಿಳಿದುಕೊಂಡಿದ್ದೇನೆ. ವಕೀಲರು ಶ್ರೀ ನಿವಾಸ್ ರವರ ವಿಚಾರಣೆ ಮಾಡಲು ತಕರಾರು ಮಾಡಿ ವಾದಿ ವಿಚಾರಣೆ ಮಾಡಬೇಕೆಂದು ಅರ್ಜಿ ಸಲ್ಲಿಸಿದ ವಿಚಾರ ನಿಮಗೆ ಗೊತ್ತ ಎಂದರೇ ಹೌದು. ತಾವು ತಮ್ಮ ಪತ್ನಿಯ ಪರವಾಗಿ ಸಾಕ್ಷಿ ಹೇಳುತ್ತಿದ್ದೀರಿ ಅವರಿಗೆ ಏನಾಗಿದೆ ಎಂದರೇ ಸಾಕ್ಷಿ ನನ್ನ ಮಗಳಿಗೆ ಮಗು ಆಗಿರುವ ಕಾರಣ ಓಡಾಡಲು ಸಾಧ್ಯವಾಗುವುದಿಲ್ಲ ಎಂದು ಹೇಳುತ್ತಾರೆ. ನಾನು ಹೇಳುವ ವಿಚಾರ ಸುಳ್ಳು ಎಂದರೇ ಸರಿಯಲ್ಲ. ನನ್ನ ಹೆಂಡತಿ ನ್ಯಾಯಾಲಯಕ್ಕೆ ಬಂದರೇ ಸತ್ಯ ಹೊರಬರುತ್ತದೆ ಎಂದು ನಾನು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೇ ಸರಿಯಲ್ಲ.

2. ನೀವು ಈ ಸಾಕ್ಷಿ ವಿಚಾರವನ್ನು ನಿಮ್ಮ ವ್ಯಯಕ್ತಿಕವಾಗಿ ನೀಡುತ್ತಿದ್ದೀರ ಅಥವಾ ನಿಮ್ಮ ಹೆಂಡತಿಯ ಸೂಚನೆ ಅನುಸಾರ ನೀಡುತ್ತಿದ್ದೀರ ಎಂದರೇ ಸಾಕ್ಷಿ ನನ್ನ ಹೆಂಡತಿಯ ಒಪ್ಪಿಗೆ ಮೇರಗೆ ನೀಡುತ್ತಿದ್ದೇನೆ ಎಂದು ಹೇಳುತ್ತಿದ್ದಾರೆ. ಈ ದಾವೆಯಲ್ಲಿ ನನಗೆ ವ್ಯಯಕ್ತಿಕ ಮಾಹಿತಿ ಇದೆ. ನಿಮ್ಮ ಪ್ರಮಾಣ ಪತ್ರದಲ್ಲಿರುವ ಅಂಶಗಳನ್ನು ನಿಮ್ಮ ಸೂಚನೆ ಅನುಸಾರ ಮಾಡಲಾಗಿದೆಯಾ ಅಥವಾ ನಿಮ್ಮ ಹೆಂಡತಿ ಸೂಚನೆ ಅನುಸಾರ ಮಾಡಲಾಗಿದೆಯಾ ಎಂದರೇ ಸಾಕ್ಷಿ ನನ್ನ ಸೂಚನೆ ಅನುಸಾಗಿ ಮಾಡಲಾಗಿದೆ. ನಿಮ್ಮ ಸಾಕ್ಷಿ ಪ್ರಮಾಣ ಪತ್ರಕ್ಕೆ ನಿಮ್ಮ ಹೆಂಡತಿ ಒಪ್ಪಿ ಗೆ ಇಲ್ಲ ಎಂದರೇ ಅವರನ್ನು ಕೇಳಿಯೇ ಮಾಡಿದ್ದೇನೆ. ನಿಮ್ಮ ಪ್ರಮಾಣ ಪತ್ರವನ್ನು ಎಲ್ಲಿ ಪ್ರಮಾಣೀಕರಿಸಿದ್ದೀರ ಎಂದರೇ ನನಗೆ ನೆನಪಿಲ್ಲ ತಿಳಿದುಕೊಂಡು ಹೇಳುತ್ತೇನೆ. ಕೆಲಸ ಮಾಡುತ್ತಿದ್ದೆ ಎಂದು ತೋರಿಸಲು ನಿಮ್ಮ Balance Sheet ಹಾಜರುಪಡಿಸಲು ತೊಂದರೆ ಇದೆಯಾ ಎಂದರೇ ಬೇಕಾದರೆ ಕೊಡುತ್ತೇನೆ. 2ನೇ ಪ್ರತಿವಾದಿ ನನ್ನ ಹೆಂಡತಿಯ ತಾಯಿ ಎಂದರೇ ಹೌದು. 2ನೇ ಪ್ರತಿವಾದಿ, 3ನೇ ಪ್ರತಿವಾದಿ ಮೇಲೆ ಬೆಂಗಳೂರಿನ Senior Citizen Tribunal ನಲ್ಲಿ ಪ್ರಕರಣ ಸಂಖ್ಯೆ

MSC/CR/67/2021-22 ರಂತೆ ಪ್ರಕರಣ ದಾಖಲು ಮಾಡಿದ ವಿಚಾರ ಗೊತ್ತ ಎಂದರೇ ಹೌದು. 2ನೇ ಪ್ರತಿವಾದಿ ತನ್ನ ಅರ್ಜಿಯಲ್ಲಿ ತಿಳಿಸಿರುವ ವಿಚಾರಗಳನ್ನು ತಿಳಿದುಕೊಂಡಿದ್ದೀರ ಎಂದರೇ ನೆನಪಿಲ್ಲ. ಆ ಅರ್ಜಿಯಲ್ಲಿ 2ನೇ ಪ್ರತಿವಾದಿ ನಾನು ಮದುವೆಯಾಗುವ ಯಾವುದೇ ಕೆಲಸ ಇರಲ್ಲಿ ಆದರೂ 3ನೇ ಪ್ರತಿವಾದಿ ನನ್ನನ್ನು ಬಲವಂತವಾಗಿ ಒಪ್ಪಿಸಿ ಮದುವೆಯಾಗಿದ್ದಾರೆ ಎಂದರೇ ಸಾಕ್ಷಿ ಇರಬೇಕು ಈಗ ನನಗೆ ನೆನಪಿಲ್ಲ. ಅಲ್ಲದೆ 2ನೇ ಪ್ರತಿವಾದಿ ಆ ಅರ್ಜಿಯಲ್ಲಿ ಆಸ್ತಿಯಲ್ಲಿ ಪಾಲನ್ನು ಕೊಡದೆ ಇದ್ದಾರೆ ನನ್ನ ಗಂಡ ನನಗೆ ವಿಚ್ಛೇದನ ನೀಡುತ್ತಾರೆ ಆಸ್ತಿಯಲ್ಲಿ ಪಾಲು ನೀಡುವಂತೆ ಬಲವಂತ ಮಾಡುತ್ತಿದ್ದಾರೆ ಎಂದು ಹೇಳಿದ್ದಾರೆ ಎಂದರೇ ಸುಳ್ಳು. ಅಲ್ಲದೆ 2ನೇ ಪ್ರತಿವಾದಿ ಆಸ್ತಿ ಬೇಡ ಮದುವೆ ಮಾಡಿಕೊಟ್ಟರೆ ಸಾಕು ಎಂದು ಹೇಳಿ ಮದುವೆ ಮಾಡಿಸಿಕೊಂಡು ನಂತರ ಆಸ್ತಿಯಲ್ಲಿ ಭಾಗ ಕೊಡಿ ಎಂದು ಒತ್ತಡ ತರುತ್ತಿದ್ದಾರೆ ಎಂದು 2ನೇ ಪ್ರತಿವಾದಿ ಅರ್ಜಿಯಲ್ಲಿ ತಿಳಿಸಿದ್ದಾರೆ ಎಂದರೇ ಸುಳ್ಳು. ಆ ಪ್ರಕರಣದಲ್ಲಿ 3ನೇ ಪ್ರತಿವಾದಿ ಹಾಜರಾಗಿ ಆ ಪ್ರಕರಣ ನಡೆಸಿದ್ದಾರೆ ಎಂದರೇ ಹೌದು. ಆ ಪ್ರಕರಣದಲ್ಲಿ 3ನೇ ಪ್ರತಿವಾದಿ 2ನೇ ಪ್ರತಿವಾದಿ ಹೇಳಿರುವ ಅಂಶಗಳು ಸುಳ್ಳು ಆದ್ದರಿಂದ ನಮಗೆ ಅವಮಾನ ಆಗಿದೆ ಅದನ್ನು ತೆಗೆಯಬೇಕೆಂದು ಯಾವುದಾದರೂ ಕ್ರಮ ಕೈಗೊಂಡಿದ್ದೀರ ಎಂದರೇ ಇಲ್ಲ. ಆ ಪ್ರಕರಣ ನನ್ನ ಪತ್ನಿಯ ವಿರುದ್ದ ಆದ ಕಾರಣ ಆದೇಶವನ್ನು ಪ್ರಶ್ನೆ ಮಾಡಿ ಗೌರವಾನ್ವಿತ ಉಚ್ಚ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿದ್ದರು ಎಂದರೇ ಹೌದು. 2ನೇ ಪ್ರತಿವಾದಿ ತನ್ನ ಪ್ರಕರಣದ ಅರ್ಜಿಯಲ್ಲಿ ತಿಳಿಸಿರುವ ಅಂಶಗಳು ಸತ್ಯ ಇದ್ದ ಕಾರಣ 3ನೇ ಪ್ರತಿವಾದಿ ಅದನ್ನು ತೆಗಿಸುವ ಪ್ರಯತ್ನ ಮಾಡಿಲ್ಲ ಎಂದರೇ ತಿಳಿದುಕೊಂಡು ಹೇಳುತ್ತೇನೆ. ನನಗೆ ಎಲ್ಲಾ ಅರ್ಥವಾಗಿದ್ದರು ಸಹ ನ್ಯಾಯಾಲಯಕ್ಕೆ ಸತ್ಯ ಗೊತ್ತಾಗುತ್ತದೆ ಎಂದು ತಿಳಿದುಕೊಂಡು ಹೇಳುತ್ತೇನೆ ಎಂದು ಹೇಳುತ್ತೇನೆ ಎಂದರೇ ಸರಿಯಲ್ಲ.

3. ನಿಡಿ-1 ನೋಂದಾಣಿಯಾಗದ ಪತ್ರ ಎಂದರೇ ಹೌದು. ನಿಡಿ-1 ರ ಮೂಲ ಪ್ರತಿ ಎಲ್ಲಿದೆ, ಅದರ ನಕಲು ನಿಮಗೆ ಎಲ್ಲಿ ಸಿಕ್ಕಿದೆ ಎಂದು ಹೇಳಬಹುದ ಎಂದರೇ ನನ್ನ ಮಾವ ನಾರಾಯಣ ಗೌಡ ಅದರ ನಕಲುನ್ನು ಕೊಟ್ಟಿದ್ದಾರೆ. ಮೂಲ ಪ್ರತಿ ಯಾರ ಹತ್ತಿರ ಇದೆ ಎಂದರೇ 3 ಪ್ರತಿ ಇರಬಹುಯ ಒಂದು ಪ್ರತಿ ನಾರಾಯಣ ಅವರ ಹತ್ತಿರ ಇನ್ನೊಂದು ಪ್ರತಿ ಅವರ ಇಬ್ಬರು ತಮ್ಮಂದಿರ ಹತ್ತಿರ ಇರಬಹುದು ತಿಳಿದು ಹೇಳುತ್ತೇನೆ. ನಿಡಿ-1 ರ ಸ್ವರೂಪ ಏನು ಎಂದರೇ ವಿಭಾಗ ಪತ್ರ. ನಿಡಿ-1 ನೋಂದಾಣಿಯಾಗಿಲ್ಲ ಎಂದರೇ ಹೌದು. ಆದರೆ ಎಲ್ಲಾ ಸಾಕ್ಷಿದಾರರು ಸಹಿ ಮಾಡಿದ್ದಾರೆ. ನಿಡಿ-1 ನ್ನು ದಿ 20.10.1993 ರಲ್ಲಿ ತಯಾರು ಮಾಡಿಲಾಗಿದೆ ಎಂದು ಬರೆದಿದ್ದಾರೆ ಎಂದರೇ ಹೌದು. ನಿಡಿ-1 ರಲ್ಲಿ ನನ್ನ ಮಗ ಪವನ್ ಮತ್ತು ವನಿತಾ ಗೌಡರವರ ಮಗ ಸಾಕೇತ್ ರವರ ಸಹಿ ಇದೆ ಎಂದರೇ ಇಲ್ಲ. ನಿಡಿ-3 ರ ದಿ 17.06.2013 ರ ದಾನ ಪತ್ರ ಎಂದರೇ ಹೌದು. ನಿಡಿ-3 ರಲ್ಲಿ ಒಟ್ಟು 19 ಆಸ್ತಿಗಳನ್ನು

3ನೇ ಪ್ರತಿವಾದಿಗೆ ದಾನ ಮಾಡಲಾಗಿದೆ ಎಂದರೇ ತೋರಿಸಲಾಗಿದೆ ಎಂದರೇ ಹೌದು. ನಿಡಿ-3 ಯಾವಾಗ ನೋಂದಾಣಿಯಾಗಿದೆ ಎಂದರೇ ದಿ 21.06.2013 ರಲ್ಲಿ ನೋಂದಾಣಿಯಾಗಿದೆ. ನಿಡಿ-3 ರ ಖಂಡಿಕೆ 3 ರಲ್ಲಿ ನಾರಾಯಣ ಗೌಡರು ದಾವಾ ಅನುಸೂಚಿ ಸ್ವತ್ತುಗಳು ನನಗೆ ಪಿತ್ರಾರ್ಜಿತ ವಾಗಿ ನನಗೆ ಬಂದಿದೆ ಎಂದು ತಿಳಿಸಿದ್ದಾರೆ ಎಂದರೇ ಹೌದು. ನಿಡಿ-3 ನ್ನು ನಾನೇ ನ್ಯಾಯಾಲಯದ ಮುಂದೆ ಹಾಜರುಪಡಿಸಿ ಗುರುತಿಸಿದ್ದೇನೆ ಎಂದರೇ ಹೌದು. ನಿಡಿ-3ರ ಪುಟ ಸಂಖ್ಯೆ 13 ರಲ್ಲಿ ಪ್ರತಿವಾದಿ 1, 2 ಮತ್ತು 4 ರವರ ಎಲ್ಲಾ ಕುಟುಂಬದವರ ಸಹಿಗಳನ್ನು ಪಡೆದುಕೊಂಡಿದ್ದೀರಿ ಎಂದು ತೋರಿಸಿದ್ದೀರ ಎಂದರೇ ಹೌದು. ನಿಡಿ-3 ರ ಪುಟ ಸಂಖ್ಯೆ 13 ರಲ್ಲಿ ಸಾಕ್ಷಿಗಳಲ್ಲಿ ಸಾಕೇತ್ ರವರ ಸಹಿಯನ್ನು ತೋರಿಸಿದ್ದಾರೆ ಎಂದರೇ ಹೌದು. ಸಹಿ ಹಾಕಿದ್ದಾರೆ.

( ಈ ಹಂತದಲ್ಲಿ ವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖದ ಮೇರೆಗೆ ಬೆರಳಚ್ಚು ಮಾಡಲಾಯಿತು.)

(ಸಾ.ಓ.ಹೇ.ಕೇ.ಸ.ಇ.ಎ.ಒ)

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಚನ್ನಪಟ್ಟಣ.

ಯಾವುದೇ ದಾಖಲಾತಿಗಳನ್ನು ಗುರುತಿಸಿಕೊಂಡಿರುವುದಿಲ್ಲ.

( ಎದುರುದಾರರು ಮಧ್ಯಂತರ ಅರ್ಜಿ ಒಂದಕ್ಕೆ ತಕರಾರು ಅರ್ಜಿ ಸಲ್ಲಿಸದ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.)

(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿರುವುದರಿಂದ ಮೂಂದೂಡಲಾಯಿತು.)

( ಈ ಹಂತದಲ್ಲಿ ವಾದಿ ಪರ ವಕೀಲರು ಮುಂದುವರೆದ ಮುಖ್ಯ ವಿಚಾರಣೆಗೆ ಕಾಲಾವಕಾಶ ಕೋರಿರುವುದರಿಂದ ಮೂಂದೂಡಲಾಯಿತು.)

( ಈ ಹಂತದಲ್ಲಿ ಪ್ರತಿವಾದಿಯ ವಿರುದ್ಧ ಏಕತರ್ಫಿಯ ಆದೇಶ ಮಾಡಿರುವುದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.)

( ಈ ಹಂತದಲ್ಲಿ ಪ್ರತಿವಾದಿ ಪ್ರತಿವಾದ ಪತ್ರವನ್ನು ಸಲ್ಲಿಸದ ಕಾರಣ ಹಾಗೂ ನ್ಯಾಯಾಲಯದ ಮುಂದೆ ಹಾಜರಾಗದ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.)